ಉಪಾಧ್ಯಕ್ಷರು : ಈ ವಿಷಯ ಏಕೋ ಬಹಳ ಸಮಸ್ಯೆಗಳನ್ನೊಳಗೊಂಡಂತಿದೆ. ಆದುದರಿಂದ ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸಚಿವರೆ, ತಾವು ದಾಂಡೇಲಿಗೆ ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡುತ್ತೇನೆಂದು ಹೇಳಿದ್ದಿರಿ. ದಾಂಡೇಲಿಯನ್ನು ತಾಲ್ಲೂಕನ್ನಾಗಿ ಮಾಡುವ ಬಗ್ಗೆಯೂ ತಾವು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೀರಿ. ಕಡೇಪಕ್ಷ ತಕ್ಷಣಕ್ಕೆ ದಾಂಡೇಲಿಗೆ ವಿಶೇಷ ತಹಶೀಲ್ದಾರ್‌ರನ್ನು ಹಾಕಲು ವ್ಯವಸ್ಥೆ ಮಾಡಿ. ದಾಂಡೇಲಿಯನ್ನು ತಾಲ್ಲೂಕು ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಎಲ್ಲೆಲ್ಲಿ ಈಗ ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡಬೇಕೆಂದು ಬೇಡಿಕೆ ಬಂದಿದೆ. ಅಲ್ಲಿಯ ಕೆಲಸದ ಒತ್ತಡ, ಅಲ್ಲಿರುವ ಕಾರ್ಯದ ಒತ್ತಡದ ಮೇಲೆ ನಾವು ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡುತ್ತೇವೆ. ಕೊಟ್ಟೂರಿನದಾಗಲಿ, ದಾಂಡೇಲಿಯದಾಗಲಿ ಒಟ್ಟಾರೆ ಎಲ್ಲೆಲ್ಲಿ ಬೇಡಿಕೆ ಬಂದಿದೆ ಅದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ.

ಉಪಾಧ್ಯಕ್ಷರೆ : ಈಗಾಗಲೇ ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಯಡಿಯಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ. ಆದುದರಿಂದ ಈ ವಿಷಯದ ಮೇಲೆ ಚರ್ಚೆ ಮುಕ್ತಾಯ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಹಾಗಾದರೆ ಈ ವಿಷಯ ಚರ್ಚೆಗೆ ಇನ್ಯಾವತ್ತು ಬರುತ್ತದೋ ಗೊತ್ತಿಲ್ಲ. ಏಕೆಂದರೆ ಅರ್ಧ ಗಂಟೆ ಕಾಲಾವಧಿ ಚರ್ಚೆಯ ಮೇಲೆ ತೆಗೆದುಕೊಳ್ಳುತ್ತೇವೆಂದರೆ ಅದು ಇನ್ಯಾವತ್ತು ಬರುತ್ತದೋ, ಒಂದು ರೀತಿಯಲ್ಲಿ ಶವಾಗಾರಕ್ಕೆ ಹೋದಂತಾಗುತ್ತದಷ್ಟೆ..

ಉಪಾಧ್ಯಕ್ಷರು : ವಾಟಾಳ್ ನಾಗರಾಜ್‌ರವರೆ, ಆ ರೀತಿಯ ಅನುಮಾನವನ್ನು ಇಟ್ಟುಕೊಳ್ಳಬೇಡಿ. ಆದಷ್ಟು ಬೇಗ ಸದರಿ ವಿಷಯವನ್ನು ಚರ್ಚೆಗೆ ತರೋಣ. ಈಗ ಎಲ್ಲರೂ ಕುಳಿತುಕೊಳ್ಳಿ. ಮಹದೇವಪ್ಪನವರೇ ತಾವು ಶುರುಮಾಡಿ, ತಾವು ಪ್ರಶ್ನೆ ಕೇಳಿ.

ರಾಮದುರ್ಗ ತಾಲ್ಲೂಕಿನ ರೇಷ್ಮೆ ಇಲಾಖೆಗೆ ಸಿಬ್ಬಂದಿ ಒದಗಿಸುವುದು

162 (944) ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗಪ್ಪ ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನಲ್ಲಿ 2004–05, 2005–06 ಮತ್ತು 2007ನೇ ಸಾಲಿನಲ್ಲಿ ರೇಷ್ಮೆ ಬೆಳೆಯುವ ಪ್ರದೇಶ ಎಷ್ಟು (ವರ್ಷವಾರು ವಿವರ ನೀಡುವುದು);

ಆ) ರಾಮದುರ್ಗ ತಾಲ್ಲೂಕು ರೇಷ್ಮೆ ಇಲಾಖೆಯ ಕಛೇರಿಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸದರಿ ಕಛೇರಿಗೆ ಅವಶ್ಯಕ ಸಿಬ್ಬಂದಿಯನ್ನು ನೇಮಕಾತಿ ಮಾಡುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನಲ್ಲಿ 2004–05, 2005–06 ಮತ್ತು 2006–07ನೇ ಸಾಲಿನಲ್ಲಿ ಯಾವ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಹಾಗೂ ಅವುಗಳಿಗೆ ಬಿಡುಗಡೆಯಾದ ಅನುದಾನವೆಷ್ಟು (ಫಲಾನಿಭವಿಗಳ ವಿವರಣೆಯನ್ನು ನೀಡುವುದು) ?

ಶ್ರೀ ಎಸ್. ಶಿವಣ್ಣ (ರೇಷ್ಮೆ ಸಚಿವರು)

ಅ) ರಾಮದುರ್ಗ ತಾಲ್ಲೂಕಿನ ವರ್ಷವಾರು ಹಿಪ್ಪುನೇರಳೆ ವ್ಯವಸಾಯದ ವಿವರ ಕೆಳಕಂಡಂತಿದೆ.

ವರ್ಷ	ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)
2004–05	4.40
2005–06	6.80
2006–07	12.80

ಆ) ಬಂದಿಲ್ಲ.

ರಾಮದುರ್ಗ ತಾಲ್ಲೂಕಿನಲ್ಲಿ ಕೆಳಕಂಡ ಇಲಾಖೆಯ ಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ. ಇಲ್ಲಿ ಮಂಜೂರಾದ ಮತ್ತು ಭರ್ತಿಯಾದ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

ಕಛೇರಿ / ಹುದ್ದೆ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದೆಗಳ ಸಂಖ್ಯೆ
1) ರೇಷ್ಮೆ ಕೃಷಿ ಕ್ಷೇತ್ರ, ರಾಮದುರ್ಗ 1. ರೇಷ್ಮೆ ನಿರೀಕ್ಷಕರು	1	1
2) ಚಾಕಿ ಸಾಕಾಣಿಕೆ ಕೇಂದ್ರ, ಹುಲಕುಂದ 1.ರೇಷ್ಮೆ ಪ್ರವರ್ತಕರು	2	2

ಇ) ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇದಲ್ಲದೆ ತಾಲ್ಲೂಕಿನ ವಿಸ್ತರಣಾ ಚಟುವಟಿಕೆಗಳಿಗಾಗಿ ಒಬ್ಬ ರೇಷ್ಮೆ ನಿರೀಕ್ಷಕರನ್ನು ಹಾಗೂ ಮೂವರು ಸಂಖ್ಯಾತಿರಿಕ್ತ ನೌಕರರನ್ನು ಅನ್ಯ ಕಾರ್ಯ ನಿಮಿತ್ತ ನಿಯೋಜಿಸಲಾಗಿದೆ.

ಈ) ಕಳೆದ ಮೂರು ವರ್ಷಗಳಲ್ಲಿ ರಾಮದುರ್ಗ ತಾಲ್ಲೂಕಿನಲ್ಲಿ ಅನುಷ್ಠಾನಗೊಳಿಸಿದ ಯೋಜನೆ / ಕಾರ್ಯಕ್ರಮಗಳಿಗೆ ಆದ ಸಹಾಯಧನದ ವೆಚ್ಚ ಹಾಗೂ ಫಲಾನುಭವಿಗಳ ವಿವರ ಈ ಕೆಳಕಂಡಂತಿದೆ.

ಯೋಜನೆ	ವೆಚ್ಚ (ರೂ.ಲಕ್ಷ)	ಫಲಾನುಭವಿಗಳ ಸಂಖ್ಯೆ
2004–05	ಇಲ್ಲ	ಇಲ್ಲ
2005–06		
1.ವಿಶೇಷ ಘಟಕ ಯೋಜನೆ	0.17	2
2. ಕೆಟಲಿಟಿಕ್ ಅಭಿವೃದ್ಧಿ ಯೋಜನೆ		
ಅ. ಹನಿ ನೀರಾವರಿ	0.24	1
ಆ. ಕಿಸಾನ್ ನರ್ಸರಿ	0.31	4
2006–07		
1. ವಿಶೇಷ ಘಟಕ ಯೋಜನೆ	0.17	2
2. ಕೆಟಿಲಿಟಿಕ್ ಅಭಿವೃದ್ಧಿ ಯೋಜನೆ		
ಅ. ರೇಷ್ಮೆ ಹುಳು ಸಾಕಾಣಿಕೆ ಮನೆ	0.50	1
3. ರೇಷ್ಮೆ ವರದಾನ ಯೋಜನೆ		
ಅ. ಹಿಪ್ಪುನೇರಳೆ ನಾಟಿ		
4. ತಾಲ್ಲೂಕು ಪಂಚಾಯತ್ ಯೋಜನೆ	0.475	10
ಅ. ರೇಷ್ಮೆ ಹುಳು ಸಾಕಾಣಿಕೆ ಮನೆ	0.50	2

ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗಪ್ಪ : ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ 1982 ರಲ್ಲಿ ರೇಷ್ಮೆ ಇಲಾಖೆ ಕಛೇರಿ ಸ್ಥಾಪನೆಗೊಂಡು ಸುಮಾರು 150 ಎಕರೆಯಲ್ಲಿ ರೇಷ್ಮೆಯನ್ನು ಬೆಳೆಯಲಾಗಿತ್ತು. 1992 ರಿಂದ 1994 ರವರೆಗೆ 300 ಎಕರೆಗಳಿಗಿಂತ ಹೆಚ್ಚು ಪ್ರದೇಶದಲ್ಲಿ ರೇಷ್ಮೆ ಬೆಳೆಯಲಾಗಿತ್ತು. ರಾಮದುರ್ಗ ತಾಲ್ಲೂಕಿನ ಚನಕನವಳ್ಳಿ ಗ್ರಾಮದಲ್ಲಿ 12 ಎಕರೆ ಜಮೀನು ಹೊಂದಿದ್ದು ಅಲ್ಲಿ ರೇಷ್ಮೆ ಇಲಾಖೆ ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಿತ್ತು. ಈಗ ಈ ಇಲಾಖೆಯ ನಿರ್ಲಕ್ಷ್ಯದಿಂದ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಯುವ ರೈತರ ಸಂಖ್ಯೆ ಕಡಿಮೆಯಾಗಿದ್ದು 2004–05 ರಲ್ಲಿ ಕೇವಲ 11 ಎಕರೆ ಬೆಳೆ ಬಂದು ಕಡಿಮೆಯಾಗಿರುವುದು ಬಹಳ ವಿಷಾದವಾದ ಸಂಗತಿಯಾಗಿದೆ. 2006–07 ನೇ ಸಾಲಿನಲ್ಲಿ ಸುಮಾರು 32 ಎಕರೆಯಲ್ಲಿ ರೇಷ್ಮೆ ಬೆಳೆದಿದ್ದು ಸ್ವಲ್ಪ ಪ್ರಗತಿ ಸಾಧಿಸಲಾಗಿದೆ. ಇಲಾಖೆಯ ಸಿಬ್ಬಂಧಿ ಅಲ್ಲಿ ಇರುವುದಿಲ್ಲ. ಅದಕ್ಕಾಗಿ ನಾನು ಮಾನ್ಯ ಉಪಾಧ್ಯಕ್ಷರ ಮೂಲಕ ವಿನಂತಿ ಮಾಡುವುದೇನೆಂದರೆ, ನನ್ನ ತಾಲ್ಲೂಕಿಗೆ ರೇಷ್ಮೆ ವಿಸ್ತರಣಾಧಿಕಾರಿಗಳನ್ನು ತಾವು ತಾತ್ಕಾಲಿಕವಾಗಿ ನೇಮಕ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಎಸ್. ಶಿವಣ್ಣ (ರೇಷ್ಮೆ ಖಾತೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವಂಥದ್ದು ಸತ್ಯ. ಹಿಂದೆ ರೇಷ್ಮೆಯನ್ನು ಅಲ್ಲಿ ಚೆನ್ನಾಗಿ ಬೆಳೆಯುತ್ತಿದ್ದರು. ಈಗ ನಾಲ್ಕೈದು ವರ್ಷಗಳ ಹಿಂದೆ ಕುಂಠಿತವಾಗಿದ್ದು ಈಗ 2006–07 ರಲ್ಲಿ 32 ಎಕರೆ ಜಮೀನಿನಲ್ಲಿ ರೇಷ್ಮೆ ಕೃಷಿ ಇದೆ. ನಾವು ಈಗಾಗಲೇ 7 ಜನ ನೌಕರರನ್ನು ಅಲ್ಲಿಗೆ ಕೊಟ್ಟಿದ್ದೇವೆ. ಈಗ ಏನಾದರೂ ಅಲ್ಲಿ ಇನ್ನೂ ಹೆಚ್ಚು ಎಕರೆ ಪ್ರದೇಶದಲ್ಲಿ ರೇಷ್ಮೆ ಕೃಷಿಯನ್ನು ಬೆಳೆಯಲು ಅಪೇಕ್ಷೆಪಟ್ಟರೆ ನಾವು ಕೊಡುವುದಕ್ಕೆ ತಯಾರಾಗಿದ್ದೇವೆ.

ಉಪಾಧ್ಯಕ್ಷರು : ಅವರು ಅಪರೂಪಕ್ಕೆ ಕೇಳಿದ್ದಾರೆ. ಅವರನ್ನು ನಿಮ್ಮ ಛೇಂಬರ್‌ಗೆ ಕರೆಸಿಕೊಂಡು ಸಮಸ್ಯೆಗೆ ಬಗೆಹರಿಸಿ.

ಶ್ರೀ ಎಸ್.ಶಿವಣ್ಣ : ಅವರು ಕೇಳಿರುವುದನ್ನು ನಾವು ಕೊಡುವುದಕ್ಕೆ ತಯಾರಿದ್ದೇವೆ.

ಉಪಾಧ್ಯಕ್ಷರು : ಯಾದವಾಡ್‌ರವರೆ, ನೀವು ಮಾನ್ಯ ಸಚಿವರ ಛೇಂಬರ್‌ಗೆ ಹೋಗಿ, ಅವರು ನಿಮ್ಮ ಸಮಸ್ಯೆಯನ್ನು ಬಗೆಹರಿಸುತ್ತಾರೆ.

ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಮಂತ್ರಿಗಳಿಗೆ ಪತ್ರವನ್ನು ಕೊಟ್ಟಿದ್ದೇನೆ. ತಮ್ಮ ಮೂಲಕ ರೇಷ್ಮೆ ವಿಸ್ತರಣಾಧಿಕಾರಿಗಳನ್ನು ಕೂಡಲೇ ಅಲ್ಲಿಗೆ ಭರ್ತಿ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಸ್. ಶಿವಣ್ಣ : ಮಾನ್ಯ ಉಪಾಧ್ಯಕ್ಷರೆ, ಆ ರೀತಿಯ ಪತ್ರವೇನೂ ಬಂದಿಲ್ಲ. ಅವರಿಗೆ ಬೇಕಾದರೆ ಕೊಡೋಣ.